Dd-360
T.P-2
Reg B G 155

7-9-1966

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ
ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೇವೆಚ್ಚ ಸೇರಿ ವರ್ಷಕ್ಕೆ ರೂ 16-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 6

SATYAVADI Daily, MYSORE 4

ಸತ್ಯವಾದಿ

52 nd Year of Publication

ಸ್ಥಾಪಕರು : ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಭಾಷಾ ಸೂತ್ರ ವಿರುದ್ಧ ರಿಟ್

ಸತ್ಯವಾದಿ ”ಯ ಸ್ವರ್ಣೋತ್ಸವ

“ಸತ್ಯವಾದಿ” ಯ ಸ್ವರ್ಣೋತ್ಸವವನ್ನು ಬೇಗನೇ ನೆರವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮತ್ತಿತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಹಾಗೂ ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮಾಧವ್ ಶೆನ್ವೈ ತಪ್ಪರು, ಶ್ರೀ ಎಂ. ಬಿ. ಬಸವಯ್ಯನವರು, ಆಶೆಯಾ ಟಾಕೀಸಿನವರು, ಪದ್ಮಭೂಷಣ ವೈದ್ಯರತ್ನ ಡಾ॥ ಎಂ.ಸಿ ಮೋದಿಯವರು, ಡಾ ॥ ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಗೋ) ಶಾಸ್ತ್ರಧರ್ಮನಿರತ ಶ್ರೀ ಅನಂತ ನರಸಿಂಹಯ್ಯಂಗಾರ್ (ಹೊಂಗನೂರು) ರವರೂ ಶುಭಾಶಯದೊಡನೆ ನೆರವು ನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಆದರ ವಿಶ್ವಾಸಗಳಿಂದ ನೀಡಿ ಸಹಕರಿಸಬೇಕಾಗಿ ವಿನಂತಿಸಿ, ಈಡೇರುವಂತೆಂದು ಆಶಿಸಿ, ಕೃತಜ್ಞತಾಪೂರ್ವಕವಂದಿಸುತ್ತೇವೆ.

ಸಂಪಾದಕ ‘ಸತ್ಯವಾದಿ’
ಜಾಮರಾಜಪುರಂ, ಮೈಸೂರು 4.

ಗಾಂಧೀಜೀ ಅಂಚೆಚೀಟಿ

ನವದೆಹಲಿ— ಗಾಂಧೀಜಿಯವರ ಬಗ್ಗೆ ಅಂಚೇಚೀಟಿಗಳನ್ನು ಹೊರಡಿಸಲು ಅಂಚೇ ತಂತ್ರಿ ಇಲಾಖೆಯವರು ಅಂಚೇಚೀಟಿ ವಿನ್ಯಾಸಗಳ ಪ್ರದರ್ಶನ ಏರ್ಪಡಿಸಿದ್ದಾರೆ : 113 ಬಂದಿವೆ ; ಇವುಗಳಲ್ಲಿ ನಾಲ್ಕು ಆಯ್ಕೆ ಮಾಡಲಾಗುವುದು.

ಗಡಿ ಸಮಸ್ಯೆ

ಬೆಂಗಳೂರು— ಮೈಸೂರು-ಮಹಾರಾಷ್ಟ್ರ ಗಡಿ ವ್ಯಾಜ್ಯವು ಕೇಂದ್ರ ಸರಕಾರದ ಪರಿಶೀಲನೆಯಲ್ಲಿದೆಯೆಂದೂ, ಇಂತರ ರಾಜ್ಯಗಳ ವ್ಯಾಜ್ಯ ನ್ಯಾಯಸ್ಥಾನಕ್ಕೆ ಸ್ಥಾಪಿಸಬೇಕೆಂದಿರುವ ಅಂತಾ ಸಮಿತಿ ಮುಂದೆ ಈ ವಿಚಾರ ಬರುವದಿಲ್ಲವೆಂದೂ ಪ್ರಧಾನಿ ಇಂದಿರಾಗಾಂಧಿಯವರು ತಿಳಿಸಿದ್ದಾರೆ.

ಮತ್ತೆ ಅಣುಬಾಂಬ್ ಆರ್ಭಟ

ಕರಾಚಿ— ಪಾಕಿಸ್ಥಾನದ ಶಸ್ತ್ರಾಸ್ತ್ರ ರಕ್ಷಣಾ ಪಡೆಗಳು ಪೂರ್ತಿ ಸುಸಜ್ಜಿತವಾಗಿದ್ದು, ನಮ್ಮ ಸುರಕ್ಷತೆಗೆ ಒದಗಬಹುದಾದ ಎಲ್ಲ ಭೀತಿಯನ್ನೂ ಎದುರಿಸಲು ಸಿದ್ಧವಾಗಿವೆ ಎಂದು ಅಕ್ಷಕ ಅಯೂಬಖಾನ್ ಹೇಳಿದ್ದಾರೆ – ಭಾರತವು ತನ್ನ ಜನತೆಯ ಕಷ್ಟಗಳನ್ನೂ ಲೆಕ್ಕಿಸದೆ, ಬಲಯುತ ಯುದ್ಧ ಸಿದ್ಧತೆಯಲ್ಲಿ ಮಗ್ನವಾಗಿದೆಯೆಂದೂ ಆಪಾದಿಸಿ, ನಾವೂ ಬಲಯುತವಾದ ಯುದ್ಧ ಸಿದ್ಧತೆ ಏರ್ಪಡಿಸದೇ ಮಾರ್ಗವಿಲ್ಲವೆಂದು ಹೇಳಿದ್ದಾರೆ.

ಶಾಸಕರ ಸಂಬಳ ಹೆಚ್ಚಿಸಲು

ಅಹಮದಾಬಾದು— ಶಾಸಕರ ಮಾಹೆಯಾನಾ ಸಂಬಳವನ್ನು ರೂ. 350 ರಿಂದ 450 ಹೆಚ್ಚಿಸುವ ಮಸೂದೆಯನ್ನು ಗುಜರಾತು ವಿಧಾನಸಭಾ ಕಾಂಗ್ರೆಸ್ ಪಕ್ಷ ಒಪ್ಪಿದೆ ; ಸಭೆ ಕಾಲದಲ್ಲಿ ದಿನ ಸಂಭಾವನೆ ರೂ: 18 ರಿಂದ 21 ಕ್ಕೆ ಹೆಚ್ಚುವುದು.

ನೀರು ಪಾಲಾದರು

ಬೊಂಬಾಯಿ— ಗಣಪತಿಯನ್ನು ನೀರಿಗೆ ಬಿಡುವ ಸಂದರ್ಭದಲ್ಲಿ ನಾಲ್ವರು ನೀರಿನಲ್ಲಿ ಮುಳುಗಿ ಸತ್ತರು.

ಅಯ್ಯೋ ಪಾಪ !

ಹಾಸನ— ಮೋಟಾರು ಡ್ರೈವರ ತುಮ್ಮುತ್ತಣ್ಣನ ಪತ್ನಿ ಮಗುವನ್ನು ಹೆತ್ತು ಸತ್ತುಹೋದಳು ; ಕೂಡಲೇ ಮಗುವೂ ಸತ್ತಿತು. ಮುನ್ನೊಂದ ಮುತ್ತಣ್ಣ ಎರಡು ಕಾಗದ ಬರೆದಿಟ್ಟ. ಒಂದರಲ್ಲಿ ತನ್ನ ಮತ್ತು ತನ್ನ ಹೆಂಡತಿಯ ಸಂಸ್ಕಾರವನ್ನು ಒಟ್ಟಿಗೆ ಒಂದೇಕಡೆ ಮಾಡುವಂತೆ ತಿಳಿಸಿದ್ದ. ಮತ್ತೊಂದರಲ್ಲಿ ತನ್ನ ಆಸ್ತಿಯನ್ನೆಲ್ಲಾ ಕೆಂಚಮ್ಮನ ದೇವಸ್ಥಾನಕ್ಕೆ ಕೊಡಬೇಕೆಂದು ತಿಳಿಸಿದ್ದ. ವಿಷ ಸೇವಿಸಿ ಹೆಂಡತಿ ಶವದ ಪಕ್ಕದಲ್ಲಿ ಹುಲಿಗಿ ಸತ್ತ.

ಸ್ವತಂತ್ರವಾಯಿತು

ಮ್ಬಾಬೇ— ಆಫ್ರಿಕಾ ರಾಜ್ಯ ಸ್ವಜಿಲ್ಯಾಂಡಿಗೆ ಎಲಿಜಬೆತ್ ರಾಣಿಯವರು ಸ್ವಾತಂತ್ರ್ಯ ಕೊಟ್ಟರು – ಇದರಿಂದ 300 ವರ್ಷಗಳಿಂದ ಕಪ್ಪು ಖಂಡದಲ್ಲಿದ್ದ ಬ್ರಿಟಿಷ್ ಆಡಳಿತ ಮುಕ್ತಾಯಗೊಂಡಿತ್ತು.

ತೇಲಿ ಬಂದಿದ್ದ ಆನೆ

ಮಂಗಳೂರು— ಶ್ರೀ ಸುಬ್ರಹ್ಮಣ್ಯದ ದೇವಾಲಯದ ಭೂಮಿಗೆ ತೇಲಿ ಬಂದಿದ್ದ ಪಳಿತ್ತು ಖಾಯಿಲೆಯಿಂದಿದ್ದ ಅನಾಥ ಆನೆಮರಿ ‘ಚಾಮುಂಡಿ’ ಶನಿವಾರ ಸತ್ತು ಹೋಯಿತೆಂದು ವರದಿಯಾಗಿದೆ.

ಕೃಷ್ಣಪ್ಪ ಬದುಕಿದ

ಬೆಂಗಳೂರು— ಚಿಣ್ಣದ ನರಸಪ್ಪನೆಂಬುವನನ್ನು ಕೊಲೆ ಮಾಡಿದ ಆಪಾದನೆಗೆ ಪ್ರಾಸಿಕ್ಯೂಟಿಂಗ್ ಇನ್ಸ್ಪೆಕ್ಟರ್ ಕೃಷ್ಣಪ್ಪನವರಿಗೆ ವಿಧಿಸಿದ್ದ ಮರಣದಂಡನೆಯು ಹೈಕೋರ್ಟಿನಲ್ಲಿ ರದ್ದಾಮಾಡಲ್ಪಟ್ಟಿತು.

ತ್ರಿಭಾಷಾ ಸೂತ್ರ ಕುರಿತು

ಕಲ್ಕತ್ತಾ— ಅಖಿಲ ಭಾರತೀಯ ಸಂಸ್ಕೃತ ರಾಷ್ಟ್ರಭಾಷಾ ಸಮ್ಮೇಳನದ ಪರ ಅದರ ಜಂಟೀ ಕಾರ್ಯದರ್ಶಿ, ರವೀಂದ್ರ ಭಾರತಿ ವಿಶ್ವವಿದ್ಯಾನಿಲಯದ ಸಂಸ್ಕೃತ ಪ್ರೊಫೆಸರ್ ಶ್ರೀ ಧ್ಯಾನೇಶ್ ನಾರಾಯಣ್ ಚಕ್ರವರ್ತಿಯವರು ಕಲ್ಕತ್ತಾ ಹೈಕೋರ್ಟಿನಲ್ಲಿ ತ್ರಿಭಾಷಾ ಸೂತ್ರ ವಿರುದ್ಧ ಹಾಕಿದ ಅರ್ಜಿಯು ಸ್ವೀಕರಿಸಲ್ಪಟ್ಟು, ಭಾರತ ಸರಕಾರ (ಗೃಹ ಮತ್ತು ವಿದ್ಯಾ ಸಚಿವಾಲಯ) ಮತ್ತು ಪಶ್ಚಿಮ ಬಂಗಾಳಾ ಸರಕಾರಕ್ಕೆ ಷೋ ಕಾಜ್ ನೋಟೀಸು ಕೊಡಲಾಗಿದೆ – ತ್ರಿಭಾಷಾಸೂತ್ರವು ಸಂಸ್ಕೃತ ವ್ಯಾಸಂಗ, ಪ್ರಸಾರ ಮತ್ತು ಅಭಿವೃದ್ಧಿಗೆ ಆತಂಕಪಡಿಸುವಂತಾಗಿದ್ದು, ರಾಜ್ಯಾಂಗದ ಹಲವು ನಿಬಂಧನೆಗಳನ್ನು ಉಲ್ಲಂಘಿಸುವಂತಾದ್ದಾಗಿದೆಯೆಂದು ಆಪಾದಿಸಲಾಗಿದೆ.

ಇದಕ್ಕೂ ಹರತಾಳ

ಷಿಲಾಂಗ್— ಅಸ್ಸಾಂ ರಾಜ್ಯದ ಪುನರ್ವಿಂಗಡನೆ ನಿಧಾನವಾಗುತ್ತಿರುವದನ್ನು ಪ್ರತಿಭಟಿಸಿ, ತಾ ॥ 9 ಸೋಮವಾರ ಹರತಾಳ ಆಚರಿಸಲು ಎಲ್ಲಾ ಪಕ್ಷಗಳ ಬೆಟ್ಟ ನಾಯಕರ ಸಮ್ಮೇಳನ ಕರೆಕೊಟ್ಟಿದೆ.

ಪೌರಸಭಾ ಚುನಾವಣೆ

ಮೈಸೂರು - ಪುರಸಭಾ ಚುನಾವಣೆಗೆ ವಿಭಾಗಾಧಿಕಾರಿಗಳು ಚುನಾವಣಾ ಅಧಿಕಾರಿಗಳಾಗಿ ನೇಮಿಸಲ್ಪಟ್ಟಿದ್ದಾರೆ ; ಡಿಸೆಂಬರು 31 ಸಭೆಯ ಅವಧಿ ಮುಗಿಯುವ ಮುಂಚೆ ಚುನಾವಣೆ ನಡೆಯಬೇಕಾಗಿದೆ : ಸಭೆಯ ಸ್ಥಾನಗಳನ್ನು 32 ರಿಂದ 35 ಕ್ಕೆ ಹೆಚ್ಚಿಸಿ, 2 ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಾಗಿಡಲಾಗಿದೆ.

(೪)

ಆಕರ್ಷಣೀಯ ಆಟಗಾರ

ಮ್ಯಾನಿಚ್ (ಡಾಡ್)— ಮ್ಯಾನಿಚ್ಚಿನ ಆಟಗಾರ ಬೆರ್ಕೆವಾರನರು ತಮ್ಮ ಕಾಲುಗಳನ್ನು ವಿಮೆ ಇಳಿಸಿದರು – 1967 ನೇ ಇಸವಿಯ ಅತ್ಯಂತ ಶ್ರೇಷ್ಠ ಫುಟ್ ಬಾಲ್ ಆಟಿಗಾರರೆಂದು ಬೇರ್ಕೆಬಾವರನ್ನು ಆರಿಸಲಾಯಿತು – ಅರ್ಜೆಂಟೈನಾದ ಕ್ರೀಡಾ ಸಂಸ್ಥೆ ಇವರಿಗೆ 3 ಲಕ್ಷ ಡಾಲರು ಕೊಡಲು ಮುಂದೆಬಂದಿದ್ದಿತು – ಇಟಲಿಯು ಕೊಡುಗೆಯು ಇದಕ್ಕೇನೂ ಕಡಮೆಯಿಲ್ಲ.

★

ಪುಸ್ತಕ ವಿಮರ್ಶೆ

ಪಂಚರಾತ್ರಾಗಮ— (ಲೇಖಕರು : ಶಾಸ್ತ್ರಧರ್ಮ ನಿರತ ಶ್ರೀ ಅನಂತನರಸಿಂಹಯ್ಯಂಗಾರ್, ಹೊಂಗನೂರು – ಪ್ರಕಾಶಕರು : ಹಿಂದೂಧರ್ಮ ಪ್ರಕಾಶನ, ಕಾಸರಗೋಡು, ಕೇರಳ)

ಹಿಂದೂಧರ್ಮಕ್ಕೆ ಆಧಾರ ಗ್ರಂಥನಾದ ವೇದಗಳಿಗೆ ' ನಿಗಮ ' ವೆಂಬ ಹೆಸರಿದೆ. ಯಜ್ಞಯಾಗಾದಿ ವಿಷಯಗಳೂ, ಆತ್ಮ ಪರಮಾತ್ಮ ಸಂಬಂಧ ವಿಷಯಗಳೆಲ್ಲಾ ಅದರಲ್ಲಿದೆ. ಪರಮಾತ್ಮನನ್ನು ಉಪಾಸನೆ ಮಾಡುವ ಕ್ರಮವನ್ನು ಬೋಧಿಸುವ ಶಾಸ್ತ್ರಗಳಿಗೆ ' ಆಗಮ " ಗಳೆಂದು ಹೆಸರು. ಅವುಗಳಲ್ಲಿ ಪಾಂಚರಾತ್ರಾಗಮವೂ ಒಂದು. ಮತಾಚಾರ್ಯರೆಲ್ಲರೂ ಇದರಲ್ಲಿ ಹೇಳಿರುವ ಉಪಾಸನಾ ಕ್ರಮವನ್ನು ಒಪ್ಪಿರುತ್ತಾರೆ. ಶ್ರೀರಂಗ, ಅನಂತಶಯನ, ಬದರಿ ನಾರಾಯಣ ಇತ್ಯಾದಿ ದಿವ್ಯದೇಶಗಳಲ್ಲಿ ಈ ಆಗಮನ ರೀತಿಯಾಗಿಯೇ ಪೂಜೆ ನಡೆಯುತ್ತಿದೆ. ಇತರ ಶಾಸ್ತ್ರಗಳಂತೆ ಈ ಆಗಮಶಾಸ್ತ್ರವೂ ಕೂಡ ಪ್ರೋತ್ಸಾಹವಿಲ್ಲದೇ ವಿಲವಾಗುತ್ತಿದೆ. ಲೇಖಕರು ಅನೇಕ ಅಮೂಲ್ಯ ವಿಷಯಗಳನ್ನು ಸಂಗ್ರಹಿಸಿ ಕೊಟ್ಟಿದ್ದಾರೆ. ಹಿಂದೂಧರ್ಮ ಪ್ರಕಾಶನದಿಂದ ಇಂಥಾ ಅನೇಕ ಪುಸ್ತಕಗಳು ಹೊರಬರಲೆಂದು ಆಶಿಸುತ್ತೇವೆ.

★

SHAKTI SUDHA

A Superb Tonic

Help The Gorakshana

ಗೋವಧೆ ಕೂಡಲೆ ನಿಶೇಧವಾಗಲಿ

Protect the Cow

ಗೋರಕ್ಷಣೆ ಮತ್ತು ಪ್ರಾಣಿದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ

Cow Slaughter should be banned Immediately

ವುಡ್‌ಲಾಂಡ್ಸ್ ದಿಗ್ವಿಜಯ 5ನೇ ವಾರ

— ಮನಮೋಹಕ ಹಿಂದಿ ಚಿತ್ರ —

ಫರ್ಜ್

ಈಸ್ಟ್‌ಮನ್ ಕಲರ್

ಪಾತ್ರ — ಜಿತೇಂದ್ರ, ಭಬಿತಾ, ಕಾಂಚನಾ, ಮುಕ್ರಿ, ಆಗಾ ಮುಂತಾದವರು

ಸಂಗೀತ — ಲಕ್ಷ್ಮೀಕಾಂತ್ ಪ್ಯಾರೇಲಾಲ್

ಆಪೆರ— ಜನಪ್ರಿಯ 2 ನೇ ವಾರ

ಚಿತ್ತಾಕರ್ಷ ಹಿಂದಿ ಚಿತ್ರ

ಬ್ರಹ್ಮಚಾರಿ

ಪ್ರತಿಯೊಬ್ಬರೂ ನೋಡಿ ಆನಂದಿಸತಕ್ಕೆ ಈಸ್ಟ್‌ಮೆ ಕಲರ್‌ನ ಹಿಂದಿ ಚಿತ್ರ

ಶಮ್ಮಿ ಕಪೂರ್, ರಾಜಶ್ರೀ, ಮುಮ್ತಾಜ್, ಪ್ರಾಣ್, ಮಹಮೂದ್

Golden Jubilee of 'Satyavadi'

The golden jubilee of the ' Satyavadi ' is to be celebrated very soon.

The President, the Prime Minister, H.H. the Maharaja of Mysore, and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

Rajasabha-bhushana Sri F. K. Irani, Sri M. B. Basaviah, Sri Madhav henoi, Sri Opera Talkies, Padmabhushana Dr. M. C. Modi, Dr. R. S. Nanjunda Swamy (Glasgow) have generously extended donations and best wishes.

It is welknown that golden jubilee of newspapers in India s rare and almost unknown in Mysore State. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, ' Satyavadi ' Chamarajapuram, Mysore 4.

Printing — Neat Binding

Lakshminarasimha Press

Sivarampet, Mysore

ಆಶೋಕ ವಿಜೆನ್‌ಸೀನ್

ಲಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು

ಎಲ್ಲ ವಿಧ ಆಯುರ್ವೇದ ಔಷಧಗಳೂನನ್ಮಲ್ಲಿ ದೊರೆಯುತ್ತವೆ

Edited, Printed & Published by Dharmaprachara Nirata M S Krishna Rao (Proprietor) at the Satyavadi Press. Chamarajapuram, Mysoe 4